ಗದಗ ಪೂರ್ವ ಭಾಗದಲ್ಲಿ ಮಳೆ ಬಾರದೆ ಬೆಳೆ ಹಾನಿ

448 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮುಂಡರಗಿ ಮತ್ತು ಗದಗ ಪೂರ್ವ ಭಾಗ ಮಳೆ ಬಾರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಪ್ರದೇಶದಲ್ಲಿ ಬರಗಾಲ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುತ್ತಿದೆ?*

ಇ) *ಮುಂಡರಗಿ ತಾಲ್ಲೂಕ್‌ನ ತುಂಗಭದ್ರಾ ಹೊಳೆಯಲ್ಲಿ ಮಹಾಪೂರದಿಂದ ಫ್ಲಡ್ ಬಂದು ಬೆಳೆ ನಾಶವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಬೆಳೆ ನಾಶವಾದ ರೈತರ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಎಷ್ಟು ಪರಿಹಾರ ಧನವನ್ನು ನೀಡಲಾಗುವುದು ಮತ್ತು ಯಾವಾಗ ನೀಡಲಾಗುವುದು?*

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹೌದು

ಆ) ಪ್ರಸ್ತುತ ಯೋಜನೆಯಡಿಯಲ್ಲಿನ ಜವಾಹರ್ ರೋಜ್‌ಗಾರ್, ಡಿ.ಪಿ.ಎ.ಪಿ. ಮತ್ತು ಉದ್ಯೋಗ ಭರವಸೆ ಇತ್ಯಾದಿ ಕಾಮಗಾರಿಗಳನ್ನು ತ್ವರಿತಗೊಳಿಸಲಾಗಿದೆ. ಅಗತ್ಯವಿದ್ದಲ್ಲಿ, ಬರ ಪರಿಹಾರ ಕಾರ್ಯಕ್ರಮದಡಿಯಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಇ) ಹೌದು. ಮುಂಡರಗಿ ತಾಲ್ಲೂಕಿನಲ್ಲಿ ಜುಲೈ ತಿಂಗಳಿನಲ್ಲಿ ತುಂಗಭದ್ರಾ ನದಿಯ ಪ್ರವಾಹದಿಂದ ಒಟ್ಟಾರೆ 1599 ಹೆಕ್ಟೇರ್ ಪ್ರದೇಶದಲ್ಲಿನ ಅಂದಾಜು ರೂ. 1.17 ಕೋಟಿಗಳ ಬೆಳೆಗೆ ಹಾನಿಯಾಗಿರುತ್ತದೆ.

ಈ) ಬೆಳೆ ಹಾನಿಗೊಂಡ ರೈತರ ಕುಟುಂಬದ ವಾರ್ಷಿಕ ವರಮಾನ ರೂ. 18000.00 ಗಳಿಗೆ ಮೀರದಿದ್ದಲ್ಲಿ, ಪ್ರತಿ ಹೆಕ್ಟೇರಿಗೆ ರೂ. 500.00 ರಂತೆ ಪರಿಹಾರ ನೀಡಲಾಗುವುದು. ಈ ನಿಟ್ಟಿನಲ್ಲಿ, ಮುಂಡರಗಿ ತಾಲ್ಲೂಕಿಗೆ ರೂ. 7.37 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಹರಿಜನ - ಗಿರಿಜನರಿಗೆ ಕಾಲೇಜು ಮಟ್ಟದಲ್ಲಿ ಕೊಡುವ ಸ್ಕಾಲರ್‌ಶಿಪ್

321 - ಶ್ರೀ ಕರಿಯಣ್ಣ (ಹೊಳಿಹೊನ್ನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹರಿಜನ - ಗಿರಿಜನರಿಗೆ ಕಾಲೇಜು ಮಟ್ಟದಲ್ಲಿ ಓದುವ ಎರಡು ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡಲು ಬರುವುದಿಲ್ಲವೆಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಇತರೆ ಹಿಂದುಳಿದವರ ಮಕ್ಕಳಿಗೆ ಗ್ರೂಪ್ (1) ಮತ್ತು ಗ್ರೂಪ್ (2)ಕ್ಕೆ ಯಾವ ನಿಯಮವು ಇಲ್ಲದೆ ಇವರಿಗೆ ಸ್ಕಾಲರ್‌ಶಿಪ್ ಸಿಗುತ್ತಿರುವುದು ನಿಜವೇ?*

ಇ) *ಹಾಗಿದ್ದಲ್ಲಿ ಈ ತಾರತಮ್ಯವಿರಲು ಕಾರಣವೇನು?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ) ರಾಜ್ಯಸರ್ಕಾರದ ನಿಯಮಾವಳಿ ಮೇರೆಗೆ ಹಿಂದುಳಿದ ವರ್ಗಗಳ 'ಎ' ಗುಂಪಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದಕ್ಕೆ ಆದಾಯ ಮಿತಿ ಮತ್ತು ಕುಟುಂಬದ ಮಕ್ಕಳ ಸಂಖ್ಯೆಯ ನಿರ್ಬಂಧವಿರುವುದಿಲ್ಲ.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು ಕೇಂದ್ರ ಸರ್ಕಾರ ರೂಪಿಸಿರುವ ನಿಯಮಗಳ ಅನುಸಾರವಾಗಿ ನೀಡಲಾಗುತ್ತಿದೆ. ಆದರೆ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಚಾಲ್ತಿಯಲ್ಲಿರುವ ರಾಜ್ಯ ಸರ್ಕಾರದ ನಿಯಮಗಳನ್ವಯ ಮಂಜೂರು ಮಾಡಲಾಗುತ್ತಿದೆ. ಆದ್ದರಿಂದ ಹರಿಜನ-ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗಗಳ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವಲ್ಲಿ ತಾರತಮ್ಯವಿದೆ.

ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರೂಪ್ ಪಂಚಾಯಿತಿಗೆ ಸೇರಿದ ಹಲಗೇವಡೇರ ಹಳ್ಳಿ ಗ್ರಾಮದ ಸರ್ವೆ ನಂಬರ್ 1 ರ ಬಗ್ಗೆ

403 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ಪಟ್ಟಣಗೆರೆ, ಗ್ರೂಪ್ ಪಂಚಾಯಿತಿಗೆ ಸೇರಿದ ಹಲಗೇವಡೇರ ಹಳ್ಳಿ ಗ್ರಾಮದ ಸರ್ವೆ ನಂಬರ್ 1ರ ವಿಸ್ತೀರ್ಣವೆಷ್ಟು?

ಆ) ಸದರಿ ಸರ್ವೆ ನಂಬರಿನಲ್ಲಿರುವ ಜಮೀನನ್ನು ಉಚಿತ ನಿವೇಶನ ಹಾಗೂ ಇತರೇ ನಾಗರೀಕ ಸೌಕರ್ಯಗಳ ಮಂಜೂರಾತಿಗಾಗಿ ಯಾರಾದರೂ ಅರ್ಜಿ ಸಲ್ಲಿಸಿದ್ದಾರೆಯೇ, ಹಾಗಿದ್ದಲ್ಲಿ ಅವರುಗಳ ಹೆಸರು ಮತ್ತು ವಿಳಾಸಗಳ ಮಾಹಿತಿ ನೀಡುವುದು?

ಇ) ಇವರುಗಳು ಯಾವ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ?

ಈ) ಸದರಿ ಸರ್ವೆ ನಂಬರ್ ಜಮೀನನ್ನು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದವರಿಗೆ ಮಂಜೂರಾತಿ ನೀಡುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಉ) ಇದ್ದರೆ ಯಾವ ನಿಯಮದ ಮೇಲೆ ಮಂಜೂರಾತಿ ನೀಡಲಾಗುವುದು?

ಊ) ಈಗಾಗಲೇ ಯಾರಿಗಾದರೂ ಮಂಜೂರಾತಿ ನೀಡಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಸರ್ವೆನಂಬರ್ 1 ರ ಒಟ್ಟು ವಿಸ್ತೀರ್ಣ 17 ಎಕರೆ 10 ಗುಂಟೆ.

ಆ) ಈ ಜಮೀನನ್ನು ಸರ್ಕಾರದ ಆದೇಶದ ಸಂಖ್ಯೆ ಪಿಡಬ್ಲ್ಯುಡಿ 82 ಐಎಎಸ್ 2 : 85, ದಿನಾಂಕ 11-2-1988ರಂತೆ ಅರಣ್ಯ ಇಲಾಖೆಗೆ ಕಾಯ್ದಿರಿಸಿರುವುದರಿಂದ, ಉಚಿತ ನಿವೇಶನವನ್ನಾಗಿ ಮಾರ್ಪಡಿಸಿ ಹಂಚಲು ಬರುವುದಿಲ್ಲವಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಇಲ್ಲ.

ಬಗರ್ ಹುಕುಂ ಸಾಗುವಳಿ ಮಾಡಲು ವಿಧಿಸಿರುವ ಕರಾರುಗಳು

47 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಖಾಯಂ ಹಕ್ಕುಪತ್ರ ನೀಡಲು ಸರ್ಕಾರದವರು ವಿಧಿಸಿರುವ ಕರಾರುಗಳೇನು?